## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2020-21 ನೇ ಸಾಲಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಮೈಕ್ರೋ ವೈಯುಕ್ತಿಕ ಸಾಲ ಯೋಜನೆಯನ್ನು ಪರಿಷ್ಕರಿಸುವ ಕುರಿತು.

**ಓದಲಾಗಿದೆ:**

1. ದಿನಾಂಕ: 01/05/2020 ರಂದು ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ, ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕಅಅನಿ/ಹೋಯೋ/2020- 21/440, ದಿನಾಂಕ: 08/07/2020.

*********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಪ್ರಸಕ್ತ ಕೋವಿಡ್-19 ರ ಸಾಂಕ್ರಾಮಿಕ ಕಾಯಿಲೆಯಿಂದ ಅಲ್ಪಸಂಖ್ಯಾತ ವರ್ಗದ ಬೀದಿಬದಿ ವ್ಯಾಪಾರಿಗಳಾದ ಕಿರಾಣಿ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರದಂತಹ ಇನ್ನಿತರೆ ಸಣ್ಣ ವ್ಯಾಪಾರಿಗಳು ವ್ಯಾಪಾರ ನಡೆಸಲಾಗದೇ ತೀವ್ರ ಆರ್ಥಿಕ ಸಂಕಷ್ಟಕ್ಕೊಳಗಾಗಿರುತ್ತಾರೆ. ಅಂತಹ ಅಲ್ಪಸಂಖ್ಯಾತರ ಕುಟುಂಬದ ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು, ಈಗಾಗಲೇ ಅನುಷ್ಠಾನಗೊಂಡಿರುವ ಮೈಕ್ರೋ ವೈಯುಕ್ತಿಕ ಸಾಲ ಯೋಜನೆಯ ಜೊತೆಯಲ್ಲಿಯೇ 2020-21 ನೇ ಸಾಲಿಗೆ ಅನ್ವಯವಾಗುವಂತೆ ಸುಮಾರು 23,000 ಅಲ್ಪಸಂಖ್ಯಾತರ ಮಹಿಳಾ ಸಣ್ಣ ವ್ಯಾಪಾರಿಗಳಿಗೆ ತಲಾ ರೂ.10,000/- ಗಳ ಸಾಲ ಸೌಲಭ್ಯವನ್ನು ಒದಗಿಸುವಂತೆ ಸಭೆಯಲ್ಲಿ ಮಾನ್ಯ ಇಲಾಖಾ ಸಚಿವರು ಸೂಚಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಂ.ಡಿ.ಸಿ. ರವರು ಪ್ರಸಕ್ತ ಅನುಷ್ಠಾನಗೊಳ್ಳುತ್ತಿರುವ ಮೈಕ್ರೋ ವೈಯುಕ್ತಿಕ ಸಾಲ ಯೋಜನೆಯ ಜೊತೆಯಲ್ಲಿಯೇ **2020-21 ನೇ ಸಾಲಿಗೆ ಅನ್ವಯವಾಗುವಂತೆ** ಪ್ರತಿ ಫಲಾನುಭವಿಗೆ ರೂ.2,000/- ಗಳ ಸಹಾಯಧನ ಹಾಗೂ ರೂ.8,000/- ಗಳ ಸಾಲ ಸೇರಿದಂತೆ ಒಟ್ಟು ರೂ.10,000/- ಗಳ ಸಾಲ ಸೌಲಭ್ಯವನ್ನು ಸುಮಾರು 23,000 ಅರ್ಹ ಮಹಿಳಾ ಫಲಾನುಭವಿಗಳಿಗೆ ಮಂಜೂರು ಮಾಡಲು ಪರಿಷ್ಕೃತ ಸರ್ಕಾರಿ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 31 MDC 2020, ಬೆಂಗಳೂರು ದಿನಾಂಕ: 17/08/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಮೈಕ್ರೋ ವೈಯುಕ್ತಿಕ ಸಾಲ (ಸಣ್ಣ ಸಾಲ) ಯೋಜನೆಯ ಜೊತೆಯಲ್ಲಿಯೇ **2020-21 ನೇ ಸಾಲಿಗೆ ಅನ್ವಯವಾಗುವಂತೆ** ಅಲ್ಪಸಂಖ್ಯಾತ ವರ್ಗದ ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಸುಮಾರು 23,000 ಅರ್ಹ ಮಹಿಳೆಯರಿಗೆ ತಲಾ ರೂ.2,000/- ಗಳ ಸಹಾಯಧನ ಹಾಗೂ ರೂ.8,000/- ಗಳ ಸಾಲ ಸೇರಿದಂತೆ ಒಟ್ಟು ರೂ.10,000/- (ಹತ್ತು ಸಾವಿರ ರೂಪಾಯಿಗಳು) ಗಳ ಸಾಲ ಸೌಲಭ್ಯವನ್ನು ಶೇ.4% ಬಡ್ಡಿ ದರದಲ್ಲಿ ಮಂಜೂರು ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಅನುಮತಿ ನೀಡಿ ಆದೇಶಿಸಲಾಗಿದೆ.

**ಷರತ್ತುಗಳು:**

1. ಸದರಿ ಯೋಜನೆಯ ಫಲಾನುಭವಿಯು ರಾಜ್ಯದ ನಿವಾಸಿಯಾಗಿರುವುದರ ಜೊತೆಗೆ ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಅಲ್ಪಸಂಖ್ಯಾತ ವರ್ಗದ ಮಹಿಳೆಯಾಗಿರತಕ್ಕದ್ದು.
2. ಒಂದು ಕುಟುಂಬದಲ್ಲಿ ಒಬ್ಬ ಮಹಿಳೆಗೆ ಮಾತ್ರ ಸಾಲ ಸೌಲಭ್ಯ ನೀಡುವುದು.
3. 2011 ರ ಜನಗಣತಿ ಅನ್ವಯ ಜಿಲ್ಲೆ ಮತ್ತು ತಾಲ್ಲೂಕುವಾರು ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ ಗುರಿ ನಿಗದಿ ಮಾಡಬೇಕು. ತಾಲ್ಲೂಕಿಗೆ ಗುರಿ ನಿಗದಿ ಮಾಡಿದಾಗ ಆಯಾ ತಾಲ್ಲೂಕಿನ ಎಲ್ಲ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗೆ ತಾಲ್ಲೂಕಿನ ಗುರಿಯ ಶೇ.60 ಹಾಗೂ ಗ್ರಾಮ ಪಂಚಾಯತಿಗಳ ಮಹಿಳೆಯರಿಗೆ ಶೇ.40 ರ ಅನುಪಾತದಲ್ಲಿ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು.
4. ಒಂದು ವೇಳೆ ಯಾವುದಾದರೂ ತಾಲ್ಲೂಕುಗಳಿಂದ ನಿಗದಿತ ಗುರಿಗನುಗುಣವಾಗಿ ಅರ್ಜಿಗಳು ಬಾರದಿದ್ದಲ್ಲಿ, ಬಾಕಿ ಉಳಿದ ಗುರಿಯನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾವರ್ಗಾಯಿಸುವಂತಿಲ್ಲ.
5. ತಳ್ಳುವ ಗಾಡಿಯಲ್ಲಿ ವ್ಯಾಪಾರ, ಬೀದಿ ಬದಿ ವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ/ಕುಂಕುಮ/ಅಗರಬತ್ತಿ/ಕರ್ಪೂರದ ವ್ಯಾಪಾರ, ಪಾದಚಾರಿ ಮಾರ್ಗದಲ್ಲಿ ಟೀ/ಕಾಫಿ ಮಾರಾಟ, ಎಳನೀರು/ಹೂವು/ಹಣ್ಣು/ತರಕಾರಿ ವ್ಯಾಪಾರದಂತಹ ಇನ್ನಿತರ ಸಣ್ಣ ವ್ಯಾಪಾರಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.
6. ಶೇ.4 ರ ಬಡ್ಡಿ ದರದಲ್ಲಿ ಪ್ರತಿ ಫಲಾನುಭವಿಗಳಿಗೆ ರೂ.2,000/- ಸಹಾಯಧನ ಹಾಗೂ ರೂ.8,000/- ಗಳ ಸಾಲ ಸೇರಿದಂತೆ ಒಟ್ಟು ರೂ.10,000/- ಗಳ ಸಾಲ ಸೌಲಭ್ಯ ನೀಡುವುದು.
7. ಅರ್ಜಿದಾರರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ 7 ದಿನಗಳ ಒಳಗಾಗಿ ಅರ್ಜಿಗಳನ್ನು ಪರಿಶೀಲಿಸಿ, ಆನ್‌ಲೈನ್ ಮುಖಾಂತರ ಆಯ್ಕೆಯಾದ ಫಲಾನುಭವಿಗಳ ಮೊಬೈಲ್‌ಗೆ ಮೆಸೇಜ್ ಕಳುಹಿಸುವುದು. ಆಯ್ಕೆಯಾದ ಫಲಾನುಭವಿಗಳು ತಮಗೆ ನೀಡಿದ ರಿಜಿಸ್ಟರ್ ನಂಬರ್ ಮೂಲಕ ಲಾಗಿನ್ ಆಗಿ ಆನ್‌ಲೈನ್ ಮೂಲಕ ದಾಖಲೆ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಂಡು ಭರ್ತಿ ಮಾಡಿ ಸಹಿ ಹಾಕಿದ ದಾಖಲೆ ಪತ್ರಗಳನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡುವುದು.
8. ಆಯ್ಕೆಯಾದ ಫಲಾನುಭವಿಗಳು (undertaking) ದಾಖಲೆಗಳನ್ನು ಆನ್ ಲೈನ್ ಮೂಲಕ ನೇರವಾಗಿ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ಸಲ್ಲಿಸಿದ ನಂತರ 7 ದಿನಗಳ ಒಳಗಾಗಿ ಫಲಾನುಭವಿಗಳಿಗೆ RTGS ಮುಖಾಂತರ ಹಣ ಬಿಡುಗಡೆ ಮಾಡುವುದು.
9. ಸಾಲ ಮರುಪಾವತಿಯ ಅವಧಿ ಕಡ್ಡಾಯವಾಗಿ ಒಂದು ವರ್ಷ ಆಗಿರುತ್ತದೆ.
10. ಸದರಿ ಯೋಜನೆಯ ಫಲಾನುಭವಿಯು ಕೆ.ಎಂ.ಡಿ.ಸಿ. ನಿಗಮದ ಇತರೆ ಯಾವುದೇ ಯೋಜನೆಯ ಅಡಿಯಲ್ಲಿ ಸಾಲ/ಸಹಾಯ ಧನ ಪಡೆದಿರಬಾರದು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ರವರು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ, ನಿಯಮಾನುಸಾರ ಪರಿಶೀಲಿಸಿ ಸಾಲಸೌಲಭ್ಯ ಮಂಜೂರು ಮಾಡುವುದು.

.. .. 3

12. ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಕೆ.ಎಂ.ಡಿ.ಸಿ. ನಿಗಮದ **"ಇತರೆ ಖರ್ಚುಗಳ ಲೆಕ್ಕಶೀರ್ಷಿಕೆ: 2225-03-102-0-11-059"** ರಡಿ ಭರಿಸತಕ್ಕದ್ದು.

13. ರಾಜ್ಯದ ಎಲ್ಲಾ ಜಿಲ್ಲೆಗಳ ಫಲಾನುಭವಿಗಳಿಗೂ ಪ್ರಾತಿನಿಧ್ಯ ಒದಗಿಸುವ ದೃಷ್ಟಿಯಿಂದ ಜಿಲ್ಲಾವಾರು ಭೌತಿಕ ಗುರಿಯನ್ನು ನಿಗದಿಪಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/8/2020

(ಎಂ.ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ

<u>**ಇವರಿಗೆ:**</u>

1. ಪ್ರಧಾನ ಮಹಾಲೇಖಪಾಲರು (ಎ & ಇ), ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಪೋಡಿಯಂ ಬ್ಲಾಕ್, ಬೆಂಗಳೂರು.

<u>**ಪ್ರತಿ:**</u>

1. ಮಾನ್ಯ ಸಚಿವರು ಜವಳಿ ಮತ್ತು ಕೈಮಗ್ಗ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿಗಳು. ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-3) ವಿಧಾನ ಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.